ವಿಜಯವಾಣಿ
ಕನ್ನಡಿಗರ ಧ್ವನಿ

**Monday 21st January 2019**

## Necessity of awareness for the use of "Free Software".

# ಉಚಿತ ತಂತ್ರಾಂಶ ಬಳಕೆಗೆ ಜಾಗೃತಿ ಅಗತ್ಯ

## ಡಾ.ರಿಚರ್ಡ್ ಸ್ಟಾಲ್ಮನ್ ಅಭಿಮತ » ಆರ್.ವಿ. ತಾಂತ್ರಿಕ ಕಾಲೇಜಿನಲ್ಲಿ ಕಾರ್ಯಾಗಾರ

■ ವಿಜಯವಾಣಿ ಸುದ್ದಿಜಾಲ ಯಶವಂತಪುರ

ತಂತ್ರಜ್ಞಾನದ ಅವಿಷ್ಕಾರಗಳ ಫಲ ಎಲ್ಲರಿಗೂ ಲಭಿಸಿದಾಗ ಮಾತ್ರ ಅವುಗಳಿಗೆ ಹೆಚ್ಚಿನ ಮಹತ್ವ ಸಿಗುತ್ತದೆ ಎಂದು ಜಿಎನ್‌ಯು ಪ್ರಾಜೆಕ್ಟ್ ಹಾಗೂ ಉಚಿತ ತಂತ್ರಾಂಶ ಫೌಂಡೇಷನ್‌ನ ಡಾ.ರಿಚರ್ಡ್ ಸ್ಟಾಲ್ಮನ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ರಸ್ತೆಯ ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಫ್ರೀ ಸಾಫ್ಟ್‌ವೇರ್ ಫೌಂಡೇಷನ್ ಆಫ್ ಇಂಡಿಯಾ ಸಂಸ್ಥೆ ಆಯೋಜಿಸಿದ್ದ ಉಚಿತ ತಂತ್ರಾಂಶ ಬಳಕೆ ಕುರಿತ ಜಾಗೃತಿ ಕಾರ್ಯಾಗಾರದಲ್ಲಿ ಮಾತನಾಡಿದರು.

**» ತಂತ್ರಜ್ಞಾನ ನಮ್ಮ ಸ್ವಾತಂತ್ರ್ಯ ಕಸಿದುಕೊಂಡಿದೆ**

ನಾವು ಈಗ ಬಳಸುತ್ತಿರುವ ಕಂಪ್ಯೂಟರ್ ತಂತ್ರಾಂಶಗಳು ನಮ್ಮನ್ನು ನಿಯಂತ್ರಿಸುತ್ತಿವೆಯೋ ಅಥವಾ ಅವುಗಳು ನಮ್ಮ ನಿಯಂತ್ರಣದಲ್ಲಿವೆಯೋ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಪ್ರಸ್ತುತ ಕಂಪ್ಯೂಟರ್ ತಂತ್ರಾಂಶಗಳು ನಮ್ಮನ್ನು ನಿಯಂತ್ರಿಸಿ ನಮ್ಮ ಖಾಸಗಿ ವಿಚಾರಗಳನ್ನು ಸಂಗ್ರಹಿಸುವ ಮೂಲಕ ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಂಡಿವೆ ಎಂದು ದೂರಿದರು.



ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಉಚಿತ ತಂತ್ರಾಂಶ ಬಳಕೆ ಕುರಿತ ಜಾಗೃತಿ ಕಾರ್ಯಾಗಾರದಲ್ಲಿ ಡಾ.ರಿಚರ್ಡ್ ಸ್ಟಾಲ್ಮನ್, ಡಿ.ಪಿ. ನಾಗರಾಜ್, ಡಾ.ಸುಬ್ರಹ್ಮಣ್ಯ ಭಾಗವಹಿಸಿದ್ದರು.

ಕಂಪ್ಯೂಟರ್ ಬಳಕೆದಾರರು, ತಂತ್ರಜ್ಞರು, ಶಿಕ್ಷಕರು ಹಾಗೂ ಸರ್ಕಾರದ ಆಡಳಿತಾಧಿಕಾರಿಗಳು ಉಚಿತ ತಂತ್ರಾಂಶದ ಉಪಯೋಗಗಳನ್ನು ಮನನ ಮಾಡಿಕೊಂಡ ನಂತರವಷ್ಟೇ ದೈನಂದಿನ ವ್ಯವಹಾರಗಳಲ್ಲಿ ಬಳಸಬೇಕೆಂದರು.

ಶಾಲಾ- ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಉಚಿತ ತಂತ್ರಾಂಶದ ಬಳಕೆದಾರರ ಗುಂಪುಗಳನ್ನು ರಚಿಸಿ ವ್ಯಾಪಕವಾಗಿ ಪ್ರಚಾರ ನಡೆಸಿ ಜಾಗೃತಿ ಮೂಡಿಸಬೇಕು ಎಂದರು. ದೇಶದ ನಾಗರಿಕರು ಉಚಿತ ತಂತ್ರಾಂಶದ ಬಳಕೆಯನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ತಂತ್ರಜ್ಞಾನದ ಪ್ರಯೋಜನ ಪಡೆದುಕೊಂಡು ಕಾರ್ಯಕ್ಷೇತ್ರದ ವಿಸ್ತಾರಕ್ಕೆ ಮುಂದಾಗಬೇಕೆಂದರು.

ರಾಷ್ಟ್ರೀಯ ಶಿಕ್ಷಣ ಸೇವಾ ಸಮಿತಿ ಟ್ರಸ್ಟ್ ಸಹ ಕಾರ್ಯದರ್ಶಿ ಡಿ.ಪಿ. ನಾಗರಾಜ್, ಆರ್.ವಿ. ತಾಂತ್ರಿಕ ಮಹಾವಿದ್ಯಾಲಯ ದ ಪ್ರಾಂಶುಪಾಲ ಡಾ.ಸುಬ್ರಹ್ಮಣ್ಯ ಉಪಸ್ಥಿತರಿದ್ದರು.